**ಕಥಾಪ್ರಭ**

# ಭರತನ ವಿಲಾಪ

ಕೆ.ಎಲ್ ರಮಾಮಣಿ

ಅತ್ತ ಅಯೋಧ್ಯೆಯಲ್ಲಿ ಅನರ್ಥ ಆರಂಭವಾಯಿತು. ಇತ್ತ ಅಂದಿನಿಂದ ಮಾವನ ಮನೆಯಲ್ಲಿದ್ದ ಭರತನಿಗೆ ಅಪಶಕುನಗಳಾಗ ತೊಡಗಿದವು. ನಿದ್ರೆಯಲ್ಲಿ ಭಯಾನಕ ಸ್ವಪ್ನಗಳು, ಎಚ್ಚರವಿರುವಾಗ ಅನೇಕ ಕೆಟ್ಟಕೆಟ್ಟ ಕಲ್ಪನೆಗಳು. ಇವನ್ನು ನಿವಾರಿಸಲು ಭರತನು ಪ್ರತಿದಿನ ದಾನ-ಧರ್ಮಗಳನ್ನು ಮಾಡುತ್ತಿದ್ದ. ಮಹಾದೇವ ಶಿವನನ್ನು ಧ್ಯಾನಿಸಿ, ತನ್ನ ತಂದೆತಾಯಿಯರ, ಸಹೋದರರ ಕುಶಲಕ್ಕಾಗಿ ಪ್ರಾರ್ಥನೆಯನ್ನೂ ಮಾಡುತ್ತಿದ್ದ. ಈ ಸಮಯದಲ್ಲೇ ಅಯೋಧ್ಯೆಯಿಂದ ದೂತನ ಆಗಮನವಾಯಿತು. ಗುರು ವಸಿಷ್ಠರ ಆಣತಿಯಂತೆ ಅದೇ ಕ್ಷಣ ಭರತ-ಶತ್ರುಘ್ನರು ಅಯೋಧ್ಯೆಗೆ ತೆರಳಿದರು.

ಕುದುರೆಗಳು ಗಾಳಿಯ ವೇಗದಲ್ಲಿ ಓಡುತ್ತ, ಬೆಟ್ಟ-ಗುಡ್ಡ-ಕಾಡು-ನದಿಗಳನ್ನು ದಾಟುತ್ತಿದ್ದವು. ಆದರೂ ಅವರಿಬ್ಬರಿಗೂ ಸಮಾಧಾನವಿಲ್ಲ. ಎಷ್ಟು ಬೇಗ ಅಯೋಧ್ಯೆ ತಲುಪುವೆವೋ ಎನಿಸುತ್ತಿತ್ತು. ಒಂದೊಂದು ನಿಮಿಷವೂ ವರುಷಗಳಾಗಿ ಹೀಗೆ ಕಳೆಯುತ್ತಿತ್ತು. ಕಡೆಗೂ ನಗರಪ್ರವೇಶ ಮಾಡಿದ ಅವರಿಗೆ ಮತ್ತೆ ಅಪಶಕುನಗಳು ಕಾಣಿಸಿಕೊಂಡವು. ಪ್ರಕೃತಿ ಶೋಭಾರಹಿತವಾಗಿ ಕಾಣಿಸಿಕೊಂಡಿತು. ನಗರ ಭಯಂಕರವಾಗಿ ತೋರತೊಡಗಿತು. ನಗರವಾಸಿಗಳು ಮಾತ್ರವಲ್ಲ, ಪ್ರಾಣಿ-ಪಕ್ಷಿಸಂಕುಲಗಳೆಲ್ಲವೂ ಅತ್ಯಂತ ದುಃಖಿತರಾಗಿದ್ದವು. ಯಾರೂ ಏನೂ ಮಾತನಾಡುತ್ತಿಲ್ಲ. ಭರತನ ಮನಸ್ಸಿನ ತುಂಬ ಭಯ, ವಿಷಾದ ತುಂಬಿಬಿಟ್ಟಿತು.


ಒಬ್ಬಳಿಗೆ ಮಾತ್ರ ಭರತನ ಆಗಮನದಿಂದ ಹರ್ಷವಾಯಿತು. ಕೈಕೇಯಿ ಮಗನನ್ನು ಸ್ವಾಗತಿಸಲು ಓಡಿಬಂದಳು. ಆದರೆ ಮಿಕ್ಕ ಪರಿವಾರದವರೆಲ್ಲರಲ್ಲೂ ದುಃಖ ಮಡುಗಟ್ಟಿರುವುದನ್ನು ಭರತ ಗಮನಿಸಿದ. ತನ್ನ ತಾಯಿಯನ್ನು ಪ್ರಶ್ನಿಸಿದ, "ತಂದೆ ದಶರಥನೆಲ್ಲಿ? ಪ್ರೀತಿಯ ತಾಯಂದಿರೆಲ್ಲಿ? ರಾಮಲಕ್ಷ್ಮಣರೆಲ್ಲಿ?" ಕಪಟವೇ ಮೂರ್ತಿವೆತ್ತಂತೆ ಇದ್ದಳು ಕೈಕೇಯಿ. ಭರತನ ಕಿವಿಗಳಲ್ಲಿ ಕಾಸಿದ ಸೀಸ ಸುರಿದಂತೆ, ನಡೆದ ಘಟನೆಗಳನ್ನು ವಿವರಿಸುತ್ತ ಹೋದಳು. ರಾಜನ ಹತ್ತಿರ ತಾನು ಪಡೆದ ವರ, ರಾಮನ ವನವಾಸ – ಈ ಎಲ್ಲ ಯೋಜನೆಗಳೂ ಮಂಥರೆಯ ಸಹಾಯದಿಂದ ಚೆನ್ನಾಗಿಯೇ ನಡೆಯಿತು. ಆದರೆ ಒಂದು ಮಾತ್ರ ದಾರಿತಪ್ಪಿ ನಡೆಯಿತು. ಅದೆಂದರೆ ನಿನ್ನ ತಂದೆಯ ಮೃತ್ಯು ಎಂದಳು. ತಂದೆಯ ಮರಣದ ಸುದ್ದಿ ಕೇಳಿದ ಭರತ "ತಂದೆ, ತಂದೆ" ಎಂದು ವಿಲಪಿಸಿದ. ಮೂರ್ಛಿತನಾಗಿ ಕೆಳಕ್ಕೆ ಬಿದ್ದ. ಆದರೆ, ರಾಮನು ಕಾಡಿಗೆ ಹೋಗಿದ್ದು, ಭರತನಿಗೆ ಅದಕ್ಕಿಂತಲೂ ಘೋರವಾದ ಸುದ್ದಿಯಾಗಿತ್ತು. ಈ ಎಲ್ಲ ಅನರ್ಥಗಳಿಗೆ ತಾನೇ ಕಾರಣ ಎಂದು ತಿಳಿದ ಅವನು ಸ್ತಂಭೀಭೂತನಾದ.

ಮಗನ ಈ ಸ್ಥಿತಿಯನ್ನು ತಾಯಿ ಕೈಕೇಯಿ ಗಮನಿಸಿ ಅವನನ್ನು ಸಮಾಧಾನ ಪಡಿಸಿದಳು. "ಮಗೂ, ರಾಜನ ಬಗೆಗೆ ಯೋಚಿಸುವ ಅಗತ್ಯವಿಲ್ಲ. ಅವರು ಪುಣ್ಯ ಗಳಿಸಿದ್ದಾರೆ. ಯಶಸ್ಸು ಗಳಿಸಿದ್ದಾರೆ. ಆದ್ದರಿಂದ ಸ್ವರ್ಗಲೋಕವನ್ನು ಸೇರಿದ್ದಾರೆ" ಎಂದಳು. ತಾಯಿಯ ಈ ನುಡಿಗಳಿಂದ ಭರತನಿಗೆ ಗಾಯದ ಮೇಲೆ ಉಪ್ಪು ಸುರಿದಂತಾಯಿತು. "ಹೇ ಪಾಪಿ, ನೀನು ಸಕಲ ರೀತಿಯಲ್ಲಿಯೂ ಈ ಕುಲದ ನಾಶಕ್ಕೆ ಕಾರಣಳಾಗಿದ್ದೀಯೆ. ಬಹುಜನ್ಮಗಳ ಫಲದಿಂದ ನನಗೆ ದಶರಥನಂತಹ ತಂದೆ, ರಾಮ, ಲಕ್ಷ್ಮಣ ಮತ್ತು ಶತ್ರುಘ್ನರಂತಹ ಸಹೋದರರು ದೊರೆತರೂ ಕೂಡ, ನನಗೆ ಜನ್ಮನೀಡಿದ ತಾಯಿಯಾದ ನೀನು ಏಕೆ ಹೀಗಾದೆ? ನನ್ನ ತಂದೆ ಬಹಳ ಸರಳಸ್ವಭಾವದವರು. ಜಗತ್ತಿನ ಯಾವ ಜೀವಿಗೆ ತಾನೆ ಶ್ರೀರಾಮಚಂದ್ರನು ಪ್ರಾಣಪ್ರಿಯನಲ್ಲ? ಅಂತಹ ರಾಮ ನಿನಗೆ ಅಹಿತನಾದನೆ? ನೀನು ನನ್ನ ಕಣ್ಣೆದುರಿಗೆ ಇರಬೇಡ. ವಿಧಿಯು ನನ್ನನ್ನು ಶ್ರೀರಾಮನ ವಿರೋಧಿಯಾದ ತಾಯಿಯ ಮಗನನ್ನಾಗಿ ಮಾಡಿದೆ. ನನ್ನಂತಹ ಪಾಪಿ ಈ ಲೋಕದಲ್ಲಿ ಮತ್ತಾರೂ ಇಲ್ಲ."– ಹೀಗೆ ಭರತನು ವಿಲಪಿಸಲು ಆರಂಭಿಸಿದನು. ಆಗ, ಮಂಥರೆಯು ಶೋಕಿಸಲು ಅಲ್ಲಿಗೆ ಬಂದಳು. ಅವಳನ್ನು ಶತ್ರುಘ್ನನು ಚೆನ್ನಾಗಿ ಥಳಿಸತೊಡಗಿದನು. ಆದರೆ ದಯಾನಿಧಿಯಾದ ಭರತನು ಅವಳನ್ನು ಬಿಡಿಸಿದನು. ತಮ್ಮನನ್ನು ಕರೆದುಕೊಂಡು ಕೌಸಲ್ಯೆಯ ಬಳಿಗೆ ಬಂದನು.

ಕೌಸಲ್ಯೆಯನ್ನು ಕಂಡ ಭರತ ತನ್ನೆಲ್ಲ ಅಳಲನ್ನು ತೋಡಿಕೊಂಡು ರೋದಿಸತೊಡಗಿದನು. ಸರಳಸ್ವಭಾವದ ಕೌಸಲ್ಯೆ ಅವನನ್ನು ಅಪ್ಪಿಕೊಂಡಳು. ಸಮಾಧಾನ ಪಡಿಸಿದಳು. ರಾಮನೇ ತಬ್ಬಿಕೊಂಡಂತಾಯಿತು ಭರತನಿಗೆ. ಕೌಸಲ್ಯೆ ಹೇಳಿದಳು: "ಭರತ, ಇದು ನಿನಗೆ ಕಷ್ಟಕಾಲ. ಧೈರ್ಯತಾಳಬೇಕಾದುದು ಇಂತಹ ಸಮಯದಲ್ಲಿಯೇ, ಮಗು. ಕಾಲ ಮತ್ತು ಕರ್ಮದ ಗತಿಯನ್ನು ತಿಳಿದು ಮನಸ್ಸಿನ ದುಃಖವನ್ನು ತೊರೆ. ಯಾರನ್ನೂ ದೂಷಿಸಬೇಡ. ದೇವರ ಲೀಲೆಯನ್ನು ಅರಿತವರಾರು? ಇಷ್ಟು ದುಃಖವನ್ನು ಅನುಭವಿಸಬೇಕಾಗಿ ಬಂದರೂ, ನಾನಿನ್ನೂ ಜೀವಿಸಿಲ್ಲವೆ? ರಾಮನ ಮನದಲ್ಲಿ ತಂದೆಯ ಆಜ್ಞೆಯಿಂದ ಸ್ವಲ್ಪವೂ ವಿಷಾದವಾಗಲಿ, ಹರ್ಷವಾಗಲಿ ಉಂಟಾಗಲಿಲ್ಲ. ಅವರ ಆಣತಿಯಂತೆ, ವಸ್ತ್ರಭೂಷಣಾದಿಗಳನ್ನು ತ್ಯಜಿಸಿ, ವಲ್ಕಲಗಳನ್ನು ಉಟ್ಟು ಅವನು ಕಾಡಿಗೆ ತೆರಳಿದನು. ಆಗ ಅವನ ಮುಖ ಪ್ರಸನ್ನತೆಯಿಂದ ಕೂಡಿತ್ತು. ರೋಷವಾಗಲಿ, ಉದ್ವೇಗವಾಗಲಿ ಇರಲಿಲ್ಲ. ಅವನನ್ನು ಅನುಸರಿಸಿ, ಸೀತೆ ಮತ್ತು ಲಕ್ಷ್ಮಣರು ಎಲ್ಲರಿಗೂ ವಂದಿಸಿ, ಕಾಡಿಗೆ ತೆರಳಿದರು. ರಾಜ ದಶರಥ ರಾಮನನ್ನು ಪ್ರೀತಿಸುತ್ತಲೇ ಬದುಕಿದ್ದರು. ರಾಮನ ಹಂಬಲದಿಂದಲೇ, ಅವನ ಮೇಲಿನ ಪ್ರೀತಿಯಿಂದಲೇ ಪ್ರಾಣವನ್ನು ನೀಗಿದರು." ಹೀಗೆ ಕೌಸಲ್ಯೆಯು ಭರತನನ್ನು ಸಂತೈಸಿದಳು.

ಆಗ ಭರತನು ಹೀಗೆ ಹೇಳಿದನು: " ದೊಡ್ಡಮ್ಮ, ಲೋಕದ ಎಲ್ಲ ಪಾಪಗಳೂ ಕೂಡಿಬಂದಷ್ಟು ಪಾಪಿ ನಾನು." ಹೀಗೆ ದುಃಖಿಸುತ್ತಿರುವ ಭರತನನ್ನು ಕೌಸಲ್ಯೆ ಸಮಾಧಾನಗೊಳಿಸಿದಳು: " ಭರತ, ಮನಸ್ಸಿನಿಂದ, ಮಾತಿನಿಂದ ಸದಾ ಶ್ರೀರಾಮನಿಗೆ ನೀನು ಪ್ರಿಯನಾಗಿರುವೆ. ನೀನು ಎಂದಿಗೂ ರಾಮನ ಶತ್ರುವಾಗಲಾರೆ. ಜಗತ್ತಿನಲ್ಲಿ ಯಾರಾದರೂ ಹಾಗೆ ಹೇಳಿದರೆ, ಅವರಿಗೆ ಕನಸಿನಲ್ಲಿಯೂ ಸುಖ ಸಿಗುವುದಿಲ್ಲ. ಸದ್ಗತಿ ದೊರೆಯುವುದಿಲ್ಲ."

ಗುರು ವಸಿಷ್ಠರು ಭರತನಿಗೆ ಅನೇಕ ಪ್ರಕಾರವಾದ ಉಪದೇಶಗಳನ್ನು ನೀಡಿದರು. ಅವನಿಂದ ದಶರಥನ ಅಂತ್ಯಸಂಸ್ಕಾರವನ್ನು ನೆರವೇರಿಸಿದರು. ತದನಂತರ, ಒಂದು ಶುಭದಿನದಂದು, ಗುರು ವಸಿಷ್ಠರು ಮಂತ್ರಿಗಳ, ನಗರದ ಮಹಾಜನರ ಸಭೆಯನ್ನು ಸೇರಿಸಿದರು. ಅಲ್ಲಿಗೆ ಭರತಶತ್ರುಘ್ನರನ್ನು ಕರೆಸಿದರು. ಮೊದಲು ಮಾತನಾಡಿದ ಅವರು, ರಾಜ ದಶರಥನ ಧರ್ಮಪರಾಯಣತೆಯನ್ನು ಸ್ಮರಿಸಿಕೊಂಡರು. ಶ್ರೀರಾಮನಲ್ಲಿ ಅವನ ಪ್ರೇಮವನ್ನೂ ನೆನಪಿಸಿಕೊಂಡರು. ಶ್ರೀರಾಮನ ಗುಣಗಳನ್ನು ಕೊಂಡಾಡುತ್ತ ಪುಲಕಿತರಾದರು. ಕಣ್ಣೀರುಗರೆದರು. "ಹೇ ಭರತ! ಹಾನಿ-ಲಾಭ, ಸುಖ-ದುಃಖ, ಜೀವನ-ಮರಣ- ಇವೆಲ್ಲ



ಭಗವಂತನ ಕೈಯಲ್ಲಿದೆಯಪ್ಪಾ. ಹೀಗಿರುವಾಗ, ಯಾರನ್ನು ತಾನೆ ದೂಷಿಸುವುದು? ಯಾರ ಮೇಲೆ ತಾನೆ ಕೋಪಗೊಳ್ಳುವುದು? ನಿನ್ನ ವಿಷಾದವನ್ನು ತ್ಯಜಿಸು. ತಂದೆಯ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸು. ರಾಜನು ರಾಜ್ಯವನ್ನು ನೀಡಿರುವುದು ನಿನಗೆ. ನಿನ್ನ ತಂದೆಯು ತನ್ನ ಮಾತನ್ನು ಉಳಿಸಿಕೊಂಡನು. ಆದರೆ ಅದಕ್ಕಾಗಿ, ರಾಮನ ವಿರಹಾಗ್ನಿಯಲ್ಲಿ ತನ್ನನ್ನು ತಾನೇ ಅರ್ಪಿಸಿಕೊಂಡು ಭಸ್ಮವಾದನು. ಅವನ ಮಾತನ್ನು ನಿಜಗೊಳಿಸಬೇಕಾದುದು ನಿನ್ನ ಧರ್ಮ. ರಾಜನಿಗೆ ತನ್ನ ಪ್ರಾಣಕ್ಕಿಂತಲೂ, ಆಡಿದ ಮಾತನ್ನು ಉಳಿಸಿಕೊಳ್ಳುವುದೇ ಪ್ರಿಯವಾಗಿತ್ತು. ಅದರಂತೆ ನಡೆದುಕೊಳ್ಳುವುದರಿಂದಲೇ ನಿನಗೂ ಒಳಿತಾಗುವುದು. ಹಿಂದಿನ ನಿದರ್ಶನಗಳನ್ನು ಕೇಳು. ತಂದೆಯ ಆಜ್ಞೆಯನ್ನು ಪಾಲಿಸಲು, ಪರಶುರಾಮ ತನ್ನ ತಾಯಿಯ ತಲೆಯನ್ನೇ ಕಡಿದು ಹಾಕಿದ. ಯಯಾತಿಯ ಮಗ ಪುರೂರವ ತನ್ನ ಯೌವನವನ್ನೇ ತಂದೆಗೆ ಧಾರೆಯೆರೆದ. ಅವರ್ಯಾರೂ ಅಪಯಶಸ್ಸಿಗೆ ಗುರಿಯಾಗಲಿಲ್ಲವಲ್ಲ! ಪಾಪಿಷ್ಠರೆಂದೆನಿಸಿಕೊಳ್ಳಲಿಲ್ಲವಲ್ಲ! ಆದ್ದರಿಂದ, ಇದು ಉಚಿತ, ಅದು ಅನುಚಿತ ಎಂದು ಚಿಂತಿಸದೆ ಶೋಕವನ್ನು ಬಿಡು. ನಿನ್ನ ತಂದೆಯ ಆಜ್ಞೆಯನ್ನು ನೆರವೇರಿಸು. ಇದರಿಂದ ಕಾಡಿನಲ್ಲಿರುವ ರಾಮ–ಸೀತೆಯರಿಗೂ ಸಂತೋಷವಾಗುತ್ತದೆ. ವನವಾಸದ ಅವಧಿ ಕಳೆದ ನಂತರ, ರಾಮ ಮರಳಿ ಬರುತ್ತಾನೆ. ಆಗ ಅವನಿಗೆ ರಾಜ್ಯವನ್ನು ಒಪ್ಪಿಸಿ, ಅವನ ಸೇವೆಯನ್ನು ಮಾಡು. ರಾಜ ಸ್ವರ್ಗವಾಸಿಯಾಗಿದ್ದಾನೆ. ರಾಮ ವನವಾಸಿಯಾಗಿದ್ದಾನೆ. ಆದ್ದರಿಂದ. ಈ ರಾಜ್ಯಕ್ಕೆ ಈಗ ನೀನೇ ಆಸರೆ."

ಆಗ ಕೌಸಲ್ಯೆ ಹೇಳುತ್ತಾಳೆ: "ಮಗೂ, ಭರತ. ಇದು ಆಪತ್ತಿನ ಸಮಯ. ಧೈರ್ಯ ತಾಳು. ಗುರುವಿನ ಆಜ್ಞೆಯನ್ನು ಮನ್ನಿಸಿ, ರಾಜ್ಯವನ್ನು ಆಳು. ಪ್ರಜೆಗಳನ್ನು ಪಾಲಿಸು."

ಭರತನು ಗುರುಗಳ ಸಲಹೆ, ತಾಯಿ ಕೌಸಲ್ಯೆಯ ವಾತ್ಸಲ್ಯಪೂರ್ಣ ನುಡಿ, ಮಂತ್ರಿಗಳ ಅಭಿಪ್ರಾಯ – ಇವೆಲ್ಲವನ್ನೂ ಕೇಳಿಸಿಕೊಂಡ. ಅವರ ಮಾತುಗಳನ್ನು ಕೇಳುತ್ತ ಕೇಳುತ್ತ ಅತ್ಯಂತ ವ್ಯಾಕುಲನಾದ. ಕಣ್ಣೀರಧಾರೆ ಹರಿಯತೊಡಗಿತು. ಅವನ ಸ್ಥಿತಿಯನ್ನು ನೋಡಿದ ಎಲ್ಲರೂ ಸ್ತಂಭೀಭೂತರಾದರು. ಅವನೊಡನೆ ಸೇರಿಕೊಂಡು, ರಾಮಪ್ರೇಮಾಮೃತದಲ್ಲಿ ಮುಳುಗಿಹೋಗಿ, ಇಹಪರದ ಪರವೆಯಿಲ್ಲದವರಾದರು.

ಭರತ ಹೇಗೋ ಧೈರ್ಯತಳೆದು, ಎಲ್ಲರಿಗೂ ಕೈಮುಗಿದುಕೊಂಡು, ಅಮೃತದಲ್ಲಿ ಅದ್ದಿತೆಗೆದಂತಹ ಕೆಳಗಿನ ಮಾತುಗಳನ್ನು ಮೃದುಮಧುರವಾಗಿ ಆಡಿದ:

" ಗುರುಗಳು ನನಗೆ ವಿವೇಚನಾಪೂರ್ಣವಾದ ಉಪದೇಶವನ್ನು ನೀಡಿದ್ದಾರೆ. ಇದು ಮಂತ್ರಿಗಳಿಗೂ, ರಾಜ್ಯದ ಪ್ರಜೆಗಳಿಗೂ ಸಮ್ಮತವಾದ ವಿಷಯವಾಗಿದೆ. ತಾಯಿಯಾದ ಕೌಸಲ್ಯಾದೇವಿಯೂ ಇದೇ ಆಜ್ಞೆಯನ್ನು ಮಾಡಿದ್ದಾರೆ. ನನಗೂ ಸಹ ಅದನ್ನು ಅವಶ್ಯವಾಗಿ ಶಿರದಲ್ಲಿ ಹೊತ್ತು ನಡೆಸಬೇಕೆಂಬ ಆಸೆ. ಏಕೆಂದರೆ, ಗುರು, ತಂದೆ, ತಾಯಿ, ಒಡೆಯ ಮತ್ತು ಸಹೃದಯರಾದ ಮಿತ್ರರ ಮಾತನ್ನು ಕೇಳಬೇಕು. ಪ್ರಸನ್ನ ಹೃದಯದಿಂದ ಅದನ್ನು ಒಳ್ಳೆಯದು ಎಂದು ಅರಿತುಕೊಂಡು ಪರಿಪಾಲಿಸಬೇಕು. ಅವರ ಮಾತಿನಲ್ಲಿ, ಇದು ಉಚಿತ ಅದು ಅನುಚಿತ ಎಂದು ವಿಂಗಡಿಸುತ್ತ ಕುಳಿತರೆ, ಪಾಪದ ಹೊರೆಯನ್ನು ಹೊರಬೇಕಾಗುತ್ತದೆ.

"ಈಗ ತಾವುಗಳು ದಯವಿಟ್ಟು ನನ್ನ ವಿನಂತಿಯನ್ನು ಕೇಳಿರಿ. ನನ್ನ ಯೋಗ್ಯತೆಗೆ ಅನುಗುಣವಾಗಿ ನನಗೆ ಬೋಧಿಸಿರಿ. ನಾನು ಮಾಡಿರುವ ಅಪರಾಧವನ್ನು ಕ್ಷಮಿಸಿರಿ. ಸಾಧುಪುರುಷರು ಪರರ ದೋಷಗಳನ್ನು ನೋಡುವುದಿಲ್ಲ. ಈಗಿನ ಪರಿಸ್ಥಿತಿಯನ್ನು ನೋಡಿರಿ. ತಂದೆ ಸ್ವರ್ಗದಲ್ಲಿದ್ದಾರೆ; ಸೀತಾರಾಮರು ವನವಾಸಿಗಳಾಗಿದ್ದಾರೆ. ತಾವು ನನಗೆ ರಾಜ್ಯವಾಳಲು ಹೇಳುತ್ತಿದ್ದೀರಿ. ಅದರಲ್ಲೇ ನನ್ನ ಒಳಿತಿದೆ ಎಂದು ಹೇಳುತ್ತಿರುವಿರಿ. ಆದರೆ ನಾನು ನಿಮಗೆಲ್ಲ ಬಿನ್ನಹ ಮಾಡುವುದು ಇದು. ನನ್ನ ಒಳಿತು ಸೀತಾಪತಿ ಶ್ರೀರಾಮಚಂದ್ರನ ಸೇವೆ ಮಾಡುವುದರಲ್ಲಿದೆ. ಆದರೆ, ನನ್ನ ತಾಯಿ ಆ ಪರಮಭಾಗ್ಯವನ್ನು ನನ್ನಿಂದ ಕಿತ್ತುಕೊಂಡಿದ್ದಾಳೆ. ನಾನು ಬಹಳವಾಗಿ ಚಿಂತಿಸಿ ನೋಡಿದ್ದೇನೆ. ಎಷ್ಟು ಯೋಚಿಸಿದರೂ, ನನ್ನ ಏಳಿಗೆಗೆ ಇದಕ್ಕಿಂತ ಉತ್ತಮ ರೀತಿಯ ಉಪಾಯ ಇಲ್ಲವೇ ಇಲ್ಲ ಎಂದು ನನಗೆ ಮನದಟ್ಟಾಗಿದೆ. ಬಟ್ಟೆಯನ್ನೇ ಹಾಕಿಕೊಳ್ಳದೆ, ಕೇವಲ ಆಭರಣಗಳನ್ನು ಧರಿಸಿದರೆ, ಶೋಭಿಸುತ್ತವೆಯೇ? ವೈರಾಗ್ಯವಿಲ್ಲದೆ, ಕೇವಲ ಬ್ರಹ್ಮವಿಚಾರ ಮಾಡುವುದು ವ್ಯರ್ಥವಲ್ಲವೇ? ಹಾಗೆಯೇ ರಾಮಸೀತೆಯರ ವಿರಹದಿಂದ ಶೋಕಸಾಗರದಲ್ಲಿ ಮುಳುಗಿರುವ ಈ ರಾಜ್ಯವನ್ನಾಳುವುದೂ ಅಷ್ಟೇ ವ್ಯರ್ಥ. ರೋಗಿಯ ಶರೀರಕ್ಕೆ ನಾನಾ ರೀತಿಯ ಭೋಗಗಳು, ಶ್ರೀಹರಿಯಲ್ಲಿ ಭಕ್ತಿಯಿಲ್ಲದೆ ಮಾಡುವ ಜಪಯೋಗಗಳು, ಜೀವವೇ ಇಲ್ಲದ ಸುಂದರ ಶರೀರ – ಇವೆಲ್ಲ ವ್ಯರ್ಥವಲ್ಲವೆ? ಅಂತೆಯೇ, ರಾಮನಿಲ್ಲದ ನನ್ನ ಬಾಳುವೆ ಕೂಡ ವ್ಯರ್ಥ.

"ದಯವಿಟ್ಟು ನೀವೆಲ್ಲರೂ ನನಗೆ ಅಪ್ಪಣೆ ಕೊಡಿ. ನಾನು ರಾಮನ ಬಳಿಗೆ ಹೋಗುತ್ತೇನೆ. ನಿಶ್ಚಯವಾಗಿಯೂ ನನ್ನ ಹಿತ ಅಡಗಿರುವುದು ಅದರಲ್ಲಿಯೇ. ನಾನು ಕುಟಿಲಬುದ್ಧಿಯ ಕೈಕೇಯಿಯ ಮಗ. ನನ್ನಂತಹ ಅಧಮನ ರಾಜ್ಯದಲ್ಲಿ ತಾವುಗಳು ಹೇಗೆ ತಾನೇ ಸುಖವಾಗಿರಬಲ್ಲಿರಿ?

ಇರಬಲ್ಲೆವು ಎಂದು ತಾವು ಎಣಿಸಿದರೆ, ಅದು ನನ್ನ ಮೇಲಿನ ನಿಮ್ಮ ಮೋಹದಿಂದ ಮಾತ್ರ ಎಂದು ಹೇಳುತ್ತೇನೆ. ನಾನು ಹೇಳುವ ನಿಜದ ಮಾತನ್ನು ಕೇಳಿ. ಧರ್ಮಶೀಲನಾದವನು ಮಾತ್ರವೇ ರಾಜನಾಗಬೇಕು. ತಾವು ಹಠಮಾಡಿ ನನಗೆ ರಾಜ್ಯವನ್ನೊಪ್ಪಿಸಿದರೆ, ರಾಜ್ಯ ಅಧೋಗತಿಗೆ ಇಳಿಯುವುದು ಖಂಡಿತ. ನನಗಿಂತ ಪಾಪಿಷ್ಠರು ಬೇರೆ ಯಾರು ತಾನೆ ಇದ್ದಾರೆ? ಹೇಳಿ. ರಾಮಸೀತೆಯರಿಗೆ ವನವಾಸವಾದುದು ನನ್ನ ಕಾರಣದಿಂದ. ರಾಜ ದಶರಥನೇನೋ ರಾಮನನ್ನು ಕಾಡಿಗೆ ಕಳುಹಿಸಿದ. ಆದರೆ ಅವನನ್ನು ಅಗಲಿದ ಕೂಡಲೇ ತಾನೂ ಸ್ವರ್ಗಸ್ಥನಾಗಿಬಿಟ್ಟ. ಈ ಎಲ್ಲ ಅನರ್ಥಗಳಿಗೆ ಕಾರಣ ನಾನು. ಹೀಗಿದ್ದರೂ, ರಾಮನಿಲ್ಲದ ಮನೆ ನೋಡಿಯೂ ಎಲ್ಲರ ಅಪಹಾಸ್ಯವನ್ನು ಕೇಳಿಯೂ ನಾನಿನ್ನೂ ಜೀವಿಸಿದ್ದೇನಲ್ಲಾ! ಇದಕ್ಕೆ ಕಾರಣ, ನನ್ನ ಮನಸ್ಸು ರಾಮನ ಪಾವನರೂಪದಲ್ಲಿ ನೆಲೆಗೊಳ್ಳದಿರುವುದೇ ಆಗಿರಬಹುದು. ಅಥವಾ ನನ್ನ ಮನಸ್ಸು ರಾಜ್ಯಭೋಗವನ್ನು ಬಯಸುತ್ತಿರಬಹುದು. ಕೈಕೇಯಿಯಿಂದ ಪಡೆದ ಈ ದೇಹ ರಾಮವಿಯೋಗದಿಂದಲೂ ನಾಶವಾಗಲಿಲ್ಲವೆಂದರೆ, ನಾನೆಷ್ಟು ಭಾಗ್ಯಹೀನ!!"

"ನನ್ನ ತಾಯಿ ರಾಮನನ್ನು ಕಾಡಿಗೆ ಕಳುಹಿಸಿದಳು. ತಂದೆಯನ್ನು ಸ್ವರ್ಗಕ್ಕೇ ಕಳುಹಿಸಿದಳು. ತಾನು ವಿಧವೆಯಾದಳು. ಪ್ರಜೆಗಳಿಗೆ ಶೋಕಸಂತಾಪಗಳನ್ನು ನೀಡಿದಳು. ನನಗೆ ಸುಖ, ಯಶಸ್ಸು ಮತ್ತು ರಾಜ್ಯ ದೊರೆಯಲಿ ಎಂದು ಆಶಿಸಿದಳು. ಅದಲ್ಲದೆ, ನಿಮ್ಮೆಲ್ಲರ ಇಚ್ಛೆಯೂ ಅದೇ ರೀತಿ ಆಗುವಂತೆ ಮಾಡಿಬಿಟ್ಟಿದ್ದಾಳೆ. ಇದಷ್ಟೂ ಸಾಲದೆಂಬಂತೆ, ಸಿಂಹಾಸನದ ಮೇಲೆ ಕುಳಿತುಕೋ ಎಂದು ಬೇರೆ ನೀವು ಹೇಳುತ್ತಿದ್ದೀರಿ. ನಾನು ನಿಮಗೆಲ್ಲ ಬಿನ್ನಹ ಮಾಡುತ್ತಿದ್ದೇನೆ. ಕೈಕೇಯಿಯ ಉದರದಲ್ಲಿ ಜನಿಸಿದ ನನಗೆ ಇದು ಉಚಿತವಲ್ಲ. ದೇವರು "ದಶರಥನ ಮಗ", "ರಾಮನ ಸಹೋದರ" ಎಂಬ ಸಂಬಂಧಗಳನ್ನು ವ್ಯರ್ಥವಾಗಿ ನನ್ನಲ್ಲಿ ಕಲ್ಪಿಸಿದನೆಂದು ತೋರುವುದು. ಅವುಗಳಿಗೆ ನಾನು ಅರ್ಹನಲ್ಲ."

"ಈಗ ನೀವು ಹೇಳಿರಿ. ನನ್ನ ಕೆಟ್ಟ ತಾಯಿ ಮತ್ತು ನನ್ನನ್ನು ಹೊರತುಪಡಿಸಿ, ಈ ಪ್ರಪಂಚದಲ್ಲಿ ಜಡ-ಚೇತನ ಯಾವುದಾಗಲೀ ಯಾರಿಗೆ ತಾನೇ ರಾಮನು ಪ್ರಾಣಪ್ರಿಯನಾಗಿಲ್ಲ?"

"ಈ ಸಂದರ್ಭದಲ್ಲಿ ರಾಜ್ಯವನ್ನು ವಹಿಸಿಕೊಳ್ಳುವುದು ನನಗೆ ಅತ್ಯಂತ ಹಾನಿಕಾರಕವಾದ ವಿಷಯವಾಗಿದೆ. ಆದರೂ ಅದರಲ್ಲೇ ನಿಮಗೆಲ್ಲರಿಗೂ ನನ್ನ ಶ್ರೇಯಸ್ಸು ಕಾಣಿಸುತ್ತಿದೆ. ಈಗ ನಡೆಯುತ್ತಿರುವುದು ನನ್ನ ಕೆಟ್ಟ ದಿನಗಳು ಎಂದು ಇದು ತೋರಿಸುತ್ತದೆ ಅಲ್ಲವೆ? ಇದರಲ್ಲಿ ನಿಮ್ಮ ದೋಷವೇನೂ ಇಲ್ಲ. ನೀವೆಲ್ಲ ನನ್ನ ಮೇಲಿನ ಪ್ರೇಮದಿಂದ ಪರವಶರಾಗಿಬಿಟ್ಟಿದ್ದೀರಿ. ತಾಯಿ ಕೌಸಲ್ಯೆ ಕೂಡ ಸಹಜವಾಗಿ ಸ್ನೇಹವಶರಾಗಿ ಈ ಮಾತುಗಳನ್ನು ಹೇಳುತ್ತಿದ್ದಾರೆ. ಗುರುಗಳು ಜ್ಞಾನಸಾಗರರು. ಆದರೆ, ಅವರು ನನಗೆ ರಾಜ್ಯಾಭಿಷೇಕದ ಶಿಕ್ಷೆ ವಿಧಿಸುತ್ತಿದ್ದಾರೆ. ಇದು ವಿಧಿಯ ವೈಪರೀತ್ಯವೇ ಸರಿ. ಈ ಅನರ್ಥಕ್ಕೆ ನನ್ನ ಸಮ್ಮತಿ ಇಲ್ಲ ಎಂದು ಹೇಗೆ ತಾನೆ ಹೇಳಲಿ? ರಾಮಸೀತೆಯರನ್ನು ಬಿಟ್ಟು ಬೇರಾರೂ ಹೇಳಲಾರರು."

"ನನಗೆ ಇಹ ಲೋಕದ ಬದುಕು ಎಂದರೇನು ಗೊತ್ತಿಲ್ಲ. ಪರಲೋಕದ ಚಿಂತೆ ನನಗಿಲ್ಲ. ನನ್ನ ಮನಸ್ಸನ್ನು ಕಾಳ್ಗಿಚ್ಚಿನಂತೆ ಸುಡುತ್ತಿರುವ ಸಂಗತಿ ಒಂದೇ. ನನ್ನ ಕಾರಣದಿಂದ ಸೀತಾರಾಮರು ದುಃಖಕ್ಕೆ ಈಡಾಗಬೇಕಾಯಿತಲ್ಲ ಎಂಬುದೇ ಅದು. ಒಬ್ಬನ ಜೀವನದ ಉತ್ತಮ ಫಲ ದೊರೆತಿರುವುದು ಕೇವಲ ಲಕ್ಷ್ಮಣನಿಗೆ ಮಾತ್ರವೇ ಎಂದು ನಾನು ಹೇಳುತ್ತೇನೆ. ಅವನು ಎಲ್ಲವನ್ನೂ ತ್ಯಜಿಸಿ, ಶ್ರೀರಾಮನ ಚರಣಕಮಲಗಳಲ್ಲಿಯೇ ಮನಸ್ಸನ್ನು ನೆಲೆಗೊಳಿಸಿದ."

"ಅಯ್ಯೋ, ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಲೆಂದೇ ನನ್ನ ಕೆಟ್ಟ ಜನ್ಮ ಆಯಿತೋ ಏನೋ? ನಾನೆಂಥ ನಿರ್ಭಾಗ್ಯ ಮನುಷ್ಯ! ಎಲ್ಲರಿಗೂ ತಲೆಬಾಗಿ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಶ್ರೀರಾಮನ ಚರಣಗಳ ದರ್ಶನವಾಗುವವರೆಗೆ, ನನ್ನ ಮನದಾಳದ ಈ ದಳ್ಳುರಿ ನಂದುವುದಿಲ್ಲ. ಆದ್ದರಿಂದ ನನಗೆ ಅದಕ್ಕಿಂತ ಬೇರಾವುದೇ ಉಪಾಯ ಹೊಳೆಯುತ್ತಿಲ್ಲ. ಶ್ರೀರಾಮನ ಹೊರತು ನನ್ನ ಮನದ ಈ ಕಳವಳವನ್ನು ಅರಿಯಬಲ್ಲವರು ಯಾರು ತಾನೇ ಇರುವರು? ನನ್ನದು ಒಂದೇ ನಿಶ್ಚಯ. ನಾಳೆ ಪ್ರಾತಃಕಾಲವೇ ಪ್ರಭು ಶ್ರೀರಾಮನ ಬಳಿಗೆ ನಾನು ತೆರಳುತ್ತೇನೆ."

"ನಾನೊಬ್ಬ ಹೀನ ಅಪರಾಧಿ. ನನ್ನ ಕಾರಣದಿಂದಾಗಿ ಈ ಎಲ್ಲ ಅನರ್ಥಗಳು ಸಂದಿವೆ. ಆದರೂ ಶ್ರೀರಾಮನು ಶರಣಾಗತನಾಗಿ ಬಂದಿರುವ ನನ್ನನ್ನು ನೋಡಿ, ನನ್ನೆಲ್ಲ ಅಪರಾಧಗಳನ್ನೂ ಮನ್ನಿಸುತ್ತಾನೆ. ಅವನು ಶೀಲಗುಣ ಸಂಪನ್ನನು. ಅವನು ತನ್ನ ಶತ್ರುವಿಗೂ ಕೆಡುಕನ್ನು ಮಾಡಲಾರನು. ಹಾಗಿರುವಾಗ ಅವನ ಸೇವಕನಾದ, ಮಗುವಾದ ನನ್ನನ್ನು ಕ್ಷಮಿಸಲಾರನೇ? ತಾವೆಲ್ಲರೂ ಇದರಲ್ಲೇ ನನ್ನ ಕಲ್ಯಾಣವಿದೆ ಎಂದು ಅರಿತುಕೊಳ್ಳಿರಿ. ದಯವಿಟ್ಟು "ವನಕ್ಕೆ ತೆರಳಿ ಶ್ರೀರಾಮನ ದರ್ಶನ ಪಡೆ" ಎಂದು ನನಗೆ ಅಪ್ಪಣೆಕೊಡಿ. ನನಗೆ ಈ ಕಾರ್ಯವನ್ನು ಸಾಧಿಸಲು ಆಶೀರ್ವಾದ ಮಾಡಿ."

"ನನ್ನ ವಿನಂತಿಯನ್ನು ಕೇಳಿದ ಶ್ರೀರಾಮನಿಗೆ ಅವನ ದಾಸನಾದ ನನ್ನ ಮೇಲೆ ಕರುಣೆ ಬರಲಿ. ಅವನು ರಾಜಧಾನಿಗೆ ಮರಳಿ ಬರಲಿ. ನಾನು ಕೆಟ್ಟತಾಯಿಯಲ್ಲಿ ಹುಟ್ಟಿದ ದೋಷವುಳ್ಳವನು, ನಿಜ. ಆದರೆ ರಾಮನಲ್ಲಿ ನನಗೆ ಭರವಸೆ ಇದೆ. ಅವನು ನನ್ನನ್ನು ತನ್ನ ತಮ್ಮನೆಂದು ತಿಳಿದು ಪ್ರೀತಿಸುತ್ತಾನೆ. ನನ್ನನ್ನು ದೂರಮಾಡುವುದಿಲ್ಲ."

ಭರತನ ಮೇಲಿನ ಮಾತುಗಳು ಎಲ್ಲರಿಗೂ ಇಷ್ಟವಾಯಿತು. ಇದುವರೆಗೂ ಅವರು ಶ್ರೀರಾಮವಿರಹಾಗ್ನಿಯಲ್ಲಿ ಬೆಂದಿದ್ದರು. ಈಗ ಅವರೆಲ್ಲರೂ ಭರತನ ಮನಸ್ಸಿನಲ್ಲಿದ್ದ ಶ್ರೀರಾಮಪ್ರೇಮವೆಂಬ ಅಮೃತದಲ್ಲಿ ಮಿಂದರು. ಭರತನ ಮಾತುಗಳಿಂದ ಅವರ ಮನಸ್ಸಿನ ನೋವು ಶಮನವಾಯಿತು. ತಾಯಿ, ಗುರುಗಳು, ಮಂತ್ರಿಗಳು, ನಗರದ ಎಲ್ಲ ನಾಗರಿಕರು ಹೇಳತೊಡಗಿದರು: "ಭರತ, ಶ್ರೀರಾಮಚಂದ್ರನ ಪ್ರೇಮದ ಸಾಕ್ಷಾತ್ ಮೂರ್ತಿರೂಪವೇ ನೀನಾಗಿರುವೆಯಪ್ಪ. ನೀನು ಶ್ರೀರಾಮನಿಗೆ ಅತ್ಯಂತ ಪ್ರಾಣಪ್ರಿಯನಾಗಿರುವೆ. ನಿನ್ನ ತಾಯಿಯ ಕುಟಿಲತೆಯನ್ನು ಕಂಡು ನಿನ್ನನ್ನು ಕೂಡ ಸಂದೇಹಿಸುವವನು ನಿಜವಾಗಲೂ ನೀಚ ಮತ್ತು ಮೂರ್ಖ. ನಿನ್ನ ಮಾತನ್ನು ಕೇಳಿ ನಮಗೆಲ್ಲ ಬಹಳ ಆನಂದವಾಗಿದೆ. ನೀನು ಒಳ್ಳೆಯದನ್ನೇ ಮಾಡುತ್ತಿದ್ದೀಯೆ. ಶೋಕಸಾಗರದಲ್ಲಿ ಮುಳುಗಿದ್ದ ನಮಗೆಲ್ಲರಿಗೂ ಆಶ್ರಯ ಇತ್ತಿರುವೆ." ಹೀಗೆ ನುಡಿದ ಪುರಜನರು, ಹಿರಿಯರು ಮೋಡದ ಘರ್ಜನೆಯನ್ನು ಕೇಳಿದ ನವಿಲು ಆನಂದಿಸುವಂತೆ, ಸಂತೋಷಪಟ್ಟರು. ಶ್ರೀರಾಮನನ್ನು ರಾಜಧಾನಿಗೆ ಕರೆತರಲೇಬೇಕು ಎಂಬ ನಿರ್ಣಯದೊಂದಿಗೆ ಕಾಡಿಗೆ ತೆರಳುವಂತೆ ಭರತನಿಗೆ ಅನುಮತಿಕೊಟ್ಟರು. ಅಷ್ಟು ಮಾತ್ರವಲ್ಲ, ತಾವೂ ಕಾಡಿಗೆ ತೆರಳಲು ಸಿದ್ಧತೆ ಮಾಡಿಕೊಂಡರು. "ಭರತ, ಧನ್ಯ ನೀನು!!" ಎನ್ನುತ್ತ, ಅವನ ಶೀಲಸ್ವಭಾವಗಳನ್ನು ಹೊಗಳುತ್ತ, ಮರುದಿನ ಬೆಳಗ್ಗೆ ಕಾಡಿಗೆ ಅವನೊಡನೆ ಹೊರಡಲು ಅನುವಾದರು. ಜಗತ್ತಿನಲ್ಲಿ ಜೀವನದ ಪರಮೋಚ್ಚ ಲಾಭವಾದ ರಾಮದರ್ಶನ ಯಾರಿಗೆ ತಾನೇ ಬೇಡ?

(ಆಧಾರ: ರಾಮಚರಿತಮಾನಸ)